For More Job News Visit : www.kscvaani.com

ವಿಜಯಪುರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ ನಿ., ವಿಜಯಪುರ.

ನಂ. ಆಡಳಿತ/ಸಿಬ್ಬಂದಿ/ನೇಮಕಾತಿ/ 11739 /2022 ವಿಜಯಪುರ, ದಿನಾಂಕ: 05-02-2022

: ಅಧಿಸೂಚನೆ :

ಮಾನ್ಯ ನಿಬಂಧಕರು, ಸಹಕಾರ ಸಂಘಗಳು, ಬೆಂಗಳೂರು ಇವರ ಆದೇಶ ಸಂಖ್ಯೆ: ಆರ್.ಎಮ್/ಸಿಆರ್‌ಡಿ/ಸಿಎಬಿ-5/39/2021-22, ದಿನಾಂಕ: 22-09-2021 ರಡಿಯಲ್ಲಿ ಹೊರಡಿಸಿದ ಆದೇಶದ ಮೇರೆಗೆ ವಿಜಯಪುರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ ನಿ., ವಿಜಯಪುರ ಇದರಲ್ಲಿ ಖಾಲಿ ಇರುವ ಈ ಕೆಳಕಂಡ ಹುದ್ದೆಗಳ ನೇರ ನೇಮಕಾತಿಗಾಗಿ ಆರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಇಚ್ಛೆವುಳ್ಳ ಅಭ್ಯರ್ಥಿಗಳು ಬ್ಯಾಂಕಿನ ಕಛೇರಿ ವೇಳೆಯಲ್ಲಿ ದಿನಾಂಕ: 15-02-2022 ರಿಂದ 02-03-2022ರ ಮಧ್ಯಾಹ್ನ 5.00 ಗಂಟೆಯ ಒಳಗಾಗಿ ಅರ್ಜಿಯನ್ನು ಪೂರೈಸಲಾಗುವುದು. ಅರ್ಜಿಯನ್ನು ಪೂರ್ಣ ಭರ್ತಿ ಮಾಡಿ ಅಗತ್ಯ ದಾಖಲಾತಿಗಳೊಂದಿಗೆ ದಿನಾಂಕ: 05-03-2022 ಸಾಯಂಕಾಲ 5.00 ಗಂಟೆಯ ಒಳಗಾಗಿ **ಸಂಚಾಲಕ ಸದಸ್ಯರು, ಸಿಬ್ಬಂದಿ ನೇಮಕಾತಿ ಸಮಿತಿ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ವಿಜಯಪುರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ ನಿ., ನೋಂದಾಯಿತ ಕಛೇರಿ, ವಿಜಯಪುರ** ಇವರ ಹೆಸರಿಗೆ ಸಲ್ಲಿಸಬೇಕು. ನೇಮಕಾತಿ ಮಾಡಲು ಉದ್ದೇಶಿಸಿದ ವಿವಿಧ ಹುದ್ದೆಗಳನ್ನು ಸರಕಾರದ ಆದೇಶದ ಪ್ರಕಾರ ಈ ಕೆಳಕಂಡಂತೆ ವರ್ಗೀಕರಿಸಿ ಮೀಸಲಿರಿಸಲಾಗಿದೆ.

1. ಮೀಸಲಾತಿ ವಿವರ :

ಅ. ಸಂ.	ಹುದ್ದೆಯ ಹೆಸರು	ಒಟ್ಟು ಹುದ್ದೆ	ವರ್ಗಗಳ ವಿವರ	ಒಟ್ಟು	ಒಳಮೀಸಲಾತಿ				
					ಸಾಮಾನ್ಯ ಅಭ್ಯರ್ಥಿ	ಮಹಿಳಾ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಮಾಜಿ ಸೈನಿಕ	ಅಂಗ ವಿಕಲರು
1.	ಹಿರಿಯ ವ್ಯವಸ್ಥಾಪಕರು (ಬ್ಯಾಕಲಾಗ-1)	03	ಪ.ಜಾ.	1	1	-	-	-	-
			ಪ.ಪಂ.	1	1	-	-	-	-
			ಸಾಮಾನ್ಯ	1	1	-	-	-	-
			ಒಟ್ಟು	3	3	-	-	-	-
2.	ಕಿರಿಯ ವ್ಯವಸ್ಥಾಪಕರು (ಬ್ಯಾಕಲಾಗ-2)	05	ಪ.ಜಾ.	1	1	-	-	-	-
			ಪ.ಪಂ.	1	1	-	-	-	-
			ಪ್ರವರ್ಗ-1	1	1	-	-	-	-
			ಸಾಮಾನ್ಯ	2	1	1	-	-	-
			ಒಟ್ಟು	5	4	1	-	-	-
3.	ಕಂಪ್ಯೂಟರ ಇಂಜಿನೀಯರ	01	ಸಾಮಾನ್ಯ	1	1	-	-	-	-
			ಒಟ್ಟು	1	1	-	-	-	-
4.	ಕ್ಷೇತ್ರಾಧಿಕಾರಿಗಳು (ಬ್ಯಾಕಲಾಗ-3)	14	ಪ.ಜಾ.	2	1	1	-	-	-
			ಪ.ಪಂ.	1	1	-	-	-	-
			ಪ್ರವ-1	1	1	-	-	-	-
			ಪ್ರವ-IIಎ	2	1	1	-	-	-
			ಪ್ರವ-IIಬಿ	1	1	-	-	-	-
			ಸಾಮಾನ್ಯ	7	2	2	2	-	1
			ಒಟ್ಟು	14	7	4	2	-	1
5.	ಕೃಷಿ ಅಭಿವೃದ್ಧಿ ಅಧಿಕಾರಿ	01	ಸಾಮಾನ್ಯ	1	1	-	-	-	-
			ಒಟ್ಟು	1	1	-	-	-	-
6.	ಪ್ರಥಮ ದರ್ಜೆ ಸಹಾಯಕರು (ಪ್ರ.ದ.ಸ.)	20	ಪ.ಜಾ.	03	1	1	1	-	-
			ಪ.ಪಂ.	01	1	-	-	-	-
			ಪ್ರವ-1	01	1	-	-	-	-
			ಪ್ರವ-IIಎ	02	1	1	-	-	-
			ಪ್ರವ-IIಬಿ	01	1	-	-	-	-
			ಪ್ರವ-IIIಎ	01	1	-	-	-	-
			ಪ್ರವ-IIIಬಿ	01	1	-	-	-	-
			ಸಾಮಾನ್ಯ	10	2	03	03	1	1
		ಒಟ್ಟು		20	09	05	04	1	1
7.	ಜವಾನ (ಪರಿಚಾರಕರು)	21	ಪ.ಜಾ.	03	1	1	1	-	-
			ಪ.ಪಂ.	01	1	-	-	-	-
			ಪ್ರವ-1	01	1	-	-	-	-
			ಪ್ರವ-IIಎ	03	1	1	1	-	-
			ಪ್ರವ-IIಬಿ	01	1	-	-	-	-
			ಪ್ರವ-IIIಎ	01	1	-	-	-	-
			ಪ್ರವ-IIIಬಿ	01	1	-	-	-	-
			ಸಾಮಾನ್ಯ	10	3	3	03	1	-
		ಒಟ್ಟು		21	10	5	5	1	-
8.	ಸೆಕ್ಯೂರಿಟಿ ಗಾರ್ಡ	02	ಪ.ಪಂ.	1	1	-	-	-	-
			ಪ್ರವರ್ಗ-1	1	1	-	-	-	-
			ಒಟ್ಟು	2	2	-	-	-	-
	ಅಂತಿಮ ಒಟ್ಟು	67		67	37	15	11	02	02

ಹೈದರಾಬಾದ ಕರ್ನಾಟಕ ವ್ಯಾಪ್ತಿಗೆ ಮೀಸಲಾತಿ

ಅ. ಸಂ.	ಹುದ್ದೆಯ ಹೆಸರು	ಒಟ್ಟು ಹುದ್ದೆ	ವರ್ಗಗಳ ವಿವರ	ಒಟ್ಟು	ಒಳಮೀಸಲಾತಿ				
					ಸಾಮಾನ್ಯ ಅಭ್ಯರ್ಥಿ	ಮಹಿಳಾ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಮಾಜಿ ಸೈನಿಕ	ಅಂಗ ವಿಕಲರು
1.	ಕ್ಷೇತ್ರಾಧಿಕಾರಿಗಳು	01	ಪ.ಜಾ.	1	1	-	-	-	-
			ಒಟ್ಟು	1	1	-	-	-	-
2.	ಪ್ರಥಮ ದರ್ಜೆ ಸಹಾಯಕರು (ಪ್ರ.ದ.ಸ.)	01	ಸಾಮಾನ್ಯ	1	1	-	-	-	-
			ಒಟ್ಟು	01	01	-	-	-	-
3.	ಜವಾನ (ಪರಿಚಾರಕರು)	02	ಸಾಮಾನ್ಯ	01	01	-	-	-	-
			ಪ್ರವ-IIಎ	01	01	-	-	-	-
			ಒಟ್ಟು	02	2	-	-	-	-
	ಅಂತಿಮ ಒಟ್ಟು	71		71	41	15	11	02	02

2. ವೇತನ ಶ್ರೇಣಿ ಈ.

Scanned with CamScanner

For More Job News Visit : www.kscvaani.com

2. ವೇತನ ಶ್ರೇಣಿ ರೂ. :

1) ಹಿರಿಯ ವ್ಯವಸ್ಥಾಪಕರು	:	45300-1100-46400-1250-53900-1450-62600-1650-72500-1900-83900-2200-88300
2) ಕಿರಿಯ ವ್ಯವಸ್ಥಾಪಕರು	:	43100-1100-46400-1250-53900-1450-62600-1650-72500-1900-83900
3) ಕಂಪ್ಯೂಟರ ಇಂಜಿನೀಯರ	:	43100-1100-46400-1250-53900-1450-62600-1650-72500-1900-83900
4) ಕ್ಷೇತ್ರಾಧಿಕಾರಿ	:	40900-1100-46400-1250-53900-1450-62600-1650-72500-1900-78200
5) ಕೃಷಿ ಅಭಿವೃದ್ಧಿ ಅಧಿಕಾರಿ	:	40900-1100-46400-1250-53900-1450-62600-1650-72500-1900-78200
6) ಪ್ರ.ದ.ಸ.	:	33450-850-36000-950-39800-1100-46400-1250-53900-1450-62600
7) ಜವಾನ	:	23500-550-24600-600-27000-650-29600-750-32600-850-36000-950-39800-1100-46400-1250-47650
8) ಸೆಕ್ಯೂರಿಟಿ ಗಾರ್ಡ	:	23500-550-24600-600-27000-650-29600-750-32600-850-36000-950-39800-1100-46400-1250-47650

ಮತ್ತು ನಿಯಮಾನುಸಾರ ತುಟ್ಟಿಭತ್ಯೆ ಹಾಗೂ ಇತರೆ ಭತ್ಯೆಗಳು.

3. **ವಿದ್ಯಾರ್ಹತೆ:**

01. **ಹಿರಿಯ ವ್ಯವಸ್ಥಾಪಕರು :** ಮಾನ್ಯತೆ ಪಡೆದ ವಿಶ್ವವಿದ್ಯಾಲಯದ ಪದವಿ, ಕಂಪ್ಯೂಟರ ಪರಿಜ್ಞಾನ ಹಾಗೂ ಕನಿಷ್ಠ ಮೂರು ವರ್ಷ ಬ್ಯಾಂಕಿನಲ್ಲಿ ವ್ಯವಸ್ಥಾಪಕ ದರ್ಜೆಯಲ್ಲಿ ಕಾರ್ಯನಿರ್ವಹಿಸಿದ ಅನುಭವ ಹೊಂದಿರಬೇಕು. ಈ ಹುದ್ದೆಗೆ ಪದವೀಧರರು ತಮ್ಮ ಪದವಿಯ ಎಲ್ಲ ವರ್ಷ/ಸೆಮಿಸ್ಟರಗಳ ಸರಾಸರಿ ಕನಿಷ್ಠ ಶೇ.60 ರಷ್ಟು ಅಂಕ ಪಡೆದಿರಬೇಕು ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಅಭ್ಯರ್ಥಿಗಳು ಕನಿಷ್ಠ 45 ಅಂಕ ಪಡೆದಿರಬೇಕು.

02. **ಕಿರಿಯ ವ್ಯವಸ್ಥಾಪಕರು :** ಮಾನ್ಯತೆ ಪಡೆದ ವಿಶ್ವವಿದ್ಯಾಲಯದ ಪದವಿ ಕಂಪ್ಯೂಟರ ಪರಿಜ್ಞಾನ ಹಾಗೂ ಕನಿಷ್ಠ ಮೂರು ವರ್ಷ ಬ್ಯಾಂಕಿನಲ್ಲಿ ಕ್ಷೇತ್ರಾಧಿಕಾರಿ ದರ್ಜೆಯಲ್ಲಿ ಕಾರ್ಯನಿರ್ವಹಿಸಿದ ಅನುಭವ ಹೊಂದಿರಬೇಕು. ಈ ಹುದ್ದೆಗೆ ಪದವೀಧರರು ತಮ್ಮ ಪದವಿಯ ಎಲ್ಲ ವರ್ಷ/ಸೆಮಿಸ್ಟರಗಳ ಸರಾಸರಿ ಕನಿಷ್ಠ ಶೇ.60 ರಷ್ಟು ಅಂಕ ಪಡೆದಿರಬೇಕು ಹಾಗೂ ಪರಿಶಿಷ್ಟ ಜಾತಿ,ಪರಿಶಿಷ್ಟ ಪಂಗಡ ಪ್ರವರ್ಗ-1 ಅಭ್ಯರ್ಥಿಗಳು ಕನಿಷ್ಠ 45 ಅಂಕ ಪಡೆದಿರಬೇಕು.

03. **ಕಂಪ್ಯೂಟರ ಇಂಜಿನೀಯರ :** ಮಾನ್ಯತೆ ಪಡೆದ ವಿಶ್ವವಿದ್ಯಾಲಯದ ಬಿ.ಇ. (ಕಂಪ್ಯೂಟರ ಸಾಯನ್ಸ್/ಇ ಮತ್ತು ಸಿ)/ಎಂ.ಸಿ.ಎ. ಈ ಹುದ್ದೆಗೆ ಪದವೀಧರರು ತಮ್ಮ ಪದವಿಯ ಎಲ್ಲ ವರ್ಷ/ಸೆಮಿಸ್ಟರಗಳ ಸರಾಸರಿ ಕನಿಷ್ಠ ಶೇ.60 ರಷ್ಟು ಅಂಕ ಪಡೆದಿರಬೇಕು. ಈ ಹುದ್ದೆಗೆ ಪ್ರವೀಣತಾ ಪರೀಕ್ಷೆ ನಡೆಸಲಾಗುವುದು.

04. **ಕ್ಷೇತ್ರಾಧಿಕಾರಿಗಳು :** ಮಾನ್ಯತೆ ಪಡೆದ ವಿಶ್ವವಿದ್ಯಾಲಯದ ಪದವಿ ಕಂಪ್ಯೂಟರ ಪರಿಜ್ಞಾನ ಹಾಗೂ ಕನಿಷ್ಠ ಎರಡು ವರ್ಷ ಬ್ಯಾಂಕಿನಲ್ಲಿ ಗುಮಾಸ್ತರ ಹುದ್ದೆಯಲ್ಲಿ ಕಾರ್ಯನಿರ್ವಹಿಸಿದ ಅನುಭವ ಹೊಂದಿರಬೇಕು. ಈ ಹುದ್ದೆಗೆ ಪದವೀಧರರು ತಮ್ಮ ಪದವಿಯ ಎಲ್ಲ ವರ್ಷ/ಸೆಮಿಸ್ಟರಗಳ ಸರಾಸರಿ ಕನಿಷ್ಠ ಶೇ.60 ರಷ್ಟು ಅಂಕ ಪಡೆದಿರಬೇಕು ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ-1ರ ಅಭ್ಯರ್ಥಿಗಳು ಕನಿಷ್ಠ 45 ಅಂಕ ಪಡೆದಿರಬೇಕು.

05. **ಕೃಷಿ ಅಭಿವೃದ್ಧಿ ಅಧಿಕಾರಿ:** ಮಾನ್ಯತೆ ಪಡೆದ ವಿಶ್ವವಿದ್ಯಾಲಯದ ಬಿ.ಎಸ್ಸಿ (ಅಗ್ರಿ) ಪದವಿ ಹಾಗೂ ಕಂಪ್ಯೂಟರ ಪರಿಜ್ಞಾನ ಹೊಂದಿರಬೇಕು.
ಈ ಹುದ್ದೆಗೆ ಪದವೀಧರರು ತಮ್ಮ ಪದವಿಯ ಎಲ್ಲ ವರ್ಷ/ಸೆಮಿಸ್ಟರಗಳ ಸರಾಸರಿ ಕನಿಷ್ಠ ಶೇ.60 ರಷ್ಟು ಅಂಕ ಪಡೆದಿರಬೇಕು.

06. **ಪ್ರಥಮ ದರ್ಜೆ ಸಹಾಯಕರು:** ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪದವಿ ಪಾಸಾಗಿರಬೇಕು. ಕಂಪ್ಯೂಟರ ತರಬೇತಿ, ಸಹಕಾರ ಕ್ಷೇತ್ರದಲ್ಲಿ ಅನುಭವ ಹೊಂದಿದವರಿಗೆ ಅರ್ಹತೆ ಮೇಲೆ ಆದ್ಯತೆ ನೀಡಲಾಗುವುದು. ಈ ಹುದ್ದೆಗೆ ಪದವೀಧರರು ತಮ್ಮ ಪದವಿಯ ಎಲ್ಲ ವರ್ಷ/ಸೆಮಿಸ್ಟರಗಳ ಸರಾಸರಿ ಕನಿಷ್ಠ ಶೇ.60 ರಷ್ಟು ಅಂಕ ಪಡೆದಿರಬೇಕು. ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-1 ಅಭ್ಯರ್ಥಿಗಳು ಕನಿಷ್ಠ 45 ಅಂಕ ಪಡೆದಿರಬೇಕು.

07. **ಜವಾನ:** ಎಸ್.ಎಸ್.ಎಲ್.ಸಿ. ತೇರ್ಗಡೆಯಾಗಿರಬೇಕು. ಈ ಹುದ್ದೆಗೆ ಕನಿಷ್ಠ ಶೇ. 60 ಅಂಕಗಳನ್ನು ಪಡೆದಿರಬೇಕು ಹಾಗೂ ಪರಿಶಿಷ್ಟ ಜಾತಿ/ಪಂಗಡ ಮತ್ತು ಪ್ರವರ್ಗ-1ರ ಅಭ್ಯರ್ಥಿಗಳು ಕನಿಷ್ಠ ಶೇ. 45 ಅಂಕ ಪಡೆದಿರಬೇಕು.

08. **ಸೆಕ್ಯೂರಿಟಿ ಗಾರ್ಡ :** ಎಸ್.ಎಸ್.ಎಲ್.ಸಿ. ತೇರ್ಗಡೆಯಾಗಿರಬೇಕು. ಈ ಹುದ್ದೆಗೆ ಕನಿಷ್ಠ ಶೇ. 60 ಅಂಕಗಳನ್ನು ಪಡೆದಿರಬೇಕು ಹಾಗೂ ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-1ರ ಪಂಗಡ ಅಭ್ಯರ್ಥಿಗಳು ಕನಿಷ್ಠ ಶೇ. 45 ಅಂಕ ಪಡೆದಿರಬೇಕು.

4. **ವಯೋಮಿತಿ:**

ಅಭ್ಯರ್ಥಿಯು ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕಕ್ಕೆ 18 ವರ್ಷ ಪೂರೈಸಿರಬೇಕು. ಗರಿಷ್ಠ ವಯೋಮಿತಿ ಈ ಕೆಳಗಿನಂತೆ ಇದೆ.

1. ಸಾಮಾನ್ಯ ಅಭ್ಯರ್ಥಿಗಳಿಗೆ 35 ವರ್ಷಗಳು ಮೀರಿರಬಾರದು.
2. ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ 38 ವರ್ಷಗಳು ಮೀರಿರಬಾರದು.
3. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ-1 ಅಭ್ಯರ್ಥಿಗಳಿಗೆ 40 ವರ್ಷಗಳು ಮೀರಿರಬಾರದು.
4. ಮಾಜಿ ಸೈನಿಕ ಅಭ್ಯರ್ಥಿಯು ಭಾರತದ ಸಶಸ್ತ್ರ ಪಡೆಯಲ್ಲಿ ಕನಿಷ್ಠ 15 ವರ್ಷ ಸೇವೆ ಸಲ್ಲಿಸಿರಬೇಕು ಮತ್ತು ಅವರು ಸಲ್ಲಿಸಿದ ಸೇವೆಯ ಜೊತೆಗೆ 3 ವರ್ಷಗಳ ವಯೋಮಿತಿಯ ರಿಯಾಯಿತಿಗೆ ಅರ್ಹರಿರುತ್ತಾರೆ. ಆದರೆ ಅವರ ವಯಸ್ಸು 45 ವರ್ಷ ಮೀರಿರಬಾರದು.
5. ವಿಧವೆ ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿ ಮೇಲ್ಕಂಡಂತೆ ನಿಗದಿ ಪಡಿಸಿರುವ ವಯೋಮಿತಿಗೆ 10 ವರ್ಷ ಸೇರಿಸಿ ಪರಿಗಣಿಸಲಾಗುವುದು.

5. **ಅರ್ಜಿ ಶುಲ್ಕ:** 1) ಸಾಮಾನ್ಯ ಹಾಗೂ ಇತರೆ ಹಿಂದುಳಿದ ಅಭ್ಯರ್ಥಿಗಳಿಗೆ ರೂ.500/- 2) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1 ಹಾಗೂ ಮಾಜಿ ಸೈನಿಕ ಅಭ್ಯರ್ಥಿಗಳಿಗೆ ರೂ.250/-

6. **ಅರ್ಜಿ ಸಲ್ಲಿಸುವ ವಿಧಾನ:** 1) ಬ್ಯಾಂಕಿನಿಂದ ಪೂರೈಸಿದ ಮೂಲ ಅರ್ಜಿಯಲ್ಲಿಯೆ ಭರ್ತಿ ಮಾಡಿ ಅರ್ಜಿ ಸಲ್ಲಿಸತಕ್ಕದ್ದು, 2) ಅರ್ಜಿಗಳನ್ನು ಪಡೆಯುವಾಗ ಆಯಾ ಹುದ್ದೆಗಳಿಗೆ ಸಂಬಂಧಿಸಿದ ಅರ್ಜಿಗಳನ್ನು ಪಡೆದುಕೊಂಡು ಆಯಾ ಹುದ್ದೆಗೆ ಸಂಬಂಧಿಸಿದ ಅರ್ಜಿಯಲ್ಲಿಯೇ ಸಲ್ಲಿಸತಕ್ಕದ್ದು, 3) ಯಾವ ಹುದ್ದೆಗೆ ಅರ್ಜಿ ಸಲ್ಲಿಸಲಾಗುತ್ತದೆ ಎಂಬುದನ್ನು ಲಕೋಟೆಯ ಮೇಲೆ ಸ್ಪಷ್ಟವಾಗಿ ನಮೂದಿಸಬೇಕು, 4) ಅರ್ಜಿಗಳನ್ನು **ಸಂಚಾಲಕ ಸದಸ್ಯರು, ನೇಮಕಾತಿ ಸಮಿತಿ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ವಿಜಯಪುರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ ನಿ., ವಿಜಯಪುರ** ಇವರ ಹೆಸರಿಗೆ ಸಲ್ಲಿಸಬೇಕು, 5) ಕೇಂದ್ರ ಕಛೇರಿ, ಸೋಲಾಪೂರ ರಸ್ತೆ, ವಿಜಯಪುರ ಇಲ್ಲಿ ಕಛೇರಿಯ ವೇಳೆಯಲ್ಲಿ ದಿನಾಂಕ: 15-02-2022 ರಿಂದ 02-03-2022ರ ವರೆಗೆ ಸಾಯಂಕಾಲ 3-30 ಘಂಟೆವರೆಗೆ ಅರ್ಜಿಗಳನ್ನು ಪಡೆಯಬಹುದಾಗಿದ್ದು, ಭರ್ತಿ ಮಾಡಿದ ಅರ್ಜಿಗಳನ್ನು ಸ್ವೀಕರಿಸುವ ದಿನಾಂಕ : 05-03-2022ರ ವರೆಗೆ ಸಾಯಂಕಾಲ 5.00 ಘಂಟೆಯವರೆಗೆ. 6) ಅರ್ಜಿಯಲ್ಲಿಯ ಎಲ್ಲಾ ಅಂಕಣಗಳನ್ನು ಭರ್ತಿ ಮಾಡಿರಬೇಕು, 7) ಅಭ್ಯರ್ಥಿಗೆ ಕನ್ನಡ ಭಾಷಾ ಪರಿಜ್ಞಾನ ಕಡ್ಡಾಯವಾಗಿರುತ್ತದೆ, 8) ಲಿಖಿತ ಹಾಗೂ ಮೌಖಿಕ ಪರೀಕ್ಷೆಗಾಗಿ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗತಕ್ಕದ್ದು, 9) ಕಂಪ್ಯೂಟರ ಇಂಜಿನೀಯರ, ಕೃಷಿ ಅಭಿವೃದ್ಧಿ ಅಧಿಕಾರಿ ಹುದ್ದೆಗಳಿಗೆ ಆಯಾ ಕ್ಷೇತ್ರದಲ್ಲಿಯ ವಿಷಯ ಪ್ರಾವಿಣ್ಯತೆ ಹೊಂದಿದವರಿಂದ ಪ್ರಾವಿಣ್ಯತೆ ಪರೀಕ್ಷೆ ಹಾಗೂ ಸಂದರ್ಶನ ಜರುಗಿಸಲಾಗುವುದು.

7. **ಆಯ್ಕೆ ವಿಧಾನ :** ಅ) ಮೇಲಿನ ವಿವಿಧ ದರ್ಜೆಯ ಹುದ್ದೆಗಳಿಗೆ (ಜವಾನ/ಸೆಕ್ಯೂರಿಟಿ ಗಾರ್ಡ ಹೊರತುಪಡಿಸಿ) ಅಭ್ಯರ್ಥಿಗಳಿಗೆ ನಿಗದಿಪಡಿಸಿದ ಅರ್ಹತಾ ಪರೀಕ್ಷೆಯಲ್ಲಿ ಗಳಿಸಿದ ಶೇಕಡಾವಾರು ಅಂಕಗಳ ಆಧಾರದ ಮೇಲೆ 1:20 ರ ಅನುಪಾತದಲ್ಲಿ ಲಿಖಿತ ಪರೀಕ್ಷೆಗೆ ಕರೆಯಲಾಗುವುದು. ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಶೇ 85ಕ್ಕೆ ಇಳಿಸಿ 1:5ರ ಅನುಪಾತದಲ್ಲಿ ಮೌಖಿಕ ಸಂದರ್ಶನಕ್ಕೆ ಕರೆಯಲಾಗುವುದು. ಇದರೊಂದಿಗೆ ಕಂಪ್ಯೂಟರ ಇಂಜಿನೀಯರ ಹಾಗೂ ಕೃಷಿ ಅಭಿವೃದ್ಧಿ ಅಧಿಕಾರಿಗಳ ಹುದ್ದೆಗೆ ಪ್ರಾವೀಣ್ಯತಾ ಪರೀಕ್ಷೆ ನಡೆಸಲಾಗುವುದು.

ಲಿಖಿತ ಪರೀಕ್ಷೆಯನ್ನು ಈ ಕೆಳಕಂಡ ವಿಷಯದ ಮೇಲೆ ನಡೆಸಲಾಗುವದು.

ಅ.ನಂ.	ವಿಷಯ	ಅಂಕಗಳು	ಅ.ನಂ.	ವಿಷಯ	ಅಂಕಗಳು
1.	ಕನ್ನಡ ಭಾಷೆ	40	2.	ಇಂಗ್ಲೀಷ ಭಾಷೆ	30
3.	ಸಾಮಾನ್ಯ ಜ್ಞಾನ	30	4.	ಸಹಕಾರ ಮತ್ತು ಬ್ಯಾಂಕಿಂಗ್	100
				ಒಟ್ಟು	200

ಜವಾನ / ಸೆಕ್ಯೂರಿಟಿ ಗಾರ್ಡ ಹುದ್ದೆಗಳಿಗೆ ಅಭ್ಯರ್ಥಿಗಳು ನಿಗದಿಪಡಿಸಿದ ಅರ್ಹತಾ ಪರೀಕ್ಷೆಯಲ್ಲಿಗಳಿಸಿದ ಶೇಕಡಾವಾರು ಅಂಕಗಳ ಆಧಾರದ ಮೇಲೆ 1:5ರ ಅನುಪಾತದಲ್ಲಿ ಮೌಖಿಕ ಸಂದರ್ಶನಕ್ಕೆ ಕರೆಯಲಾಗುವುದು. ಲಿಖಿತ ಪರೀಕ್ಷೆ ಮತ್ತು ಸಂದರ್ಶನದ ದಿನಾಂಕ, ಸ್ಥಳ ಮತ್ತು ಸಮಯ ಇವುಗಳ ವಿವರಗಳನ್ನು ಪ್ರತ್ಯೇಕವಾಗಿ ತಿಳಿಸಲಾಗುವುದು.

8. **ಅಭ್ಯರ್ಥಿಗಳು ಈ ಕೆಳಗಿನ ದಾಖಲಾತಿಗಳನ್ನು ಸ್ವಯಂ ದೃಢೀಕರಿಸಿ ಝರಾಕ್ಸ ಪ್ರತಿಯನ್ನು ಲಗತ್ತಿಸಬೇಕು.**

1. ಸ್ವ - ಹಸ್ತಾಕ್ಷರವಿರುವ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಅಂಟಿಸಬೇಕು, 2) ವಯಸ್ಸು ದೃಢೀಕರಣ ಕುರಿತು ಎಸ್.ಎಸ್.ಎಲ್.ಸಿ. ಅಂಕಪಟ್ಟಿ/ವರ್ಗಾವಣೆ ಪ್ರಮಾಣ ಪತ್ರ ಲಗತ್ತಿಸಬೇಕು, 3) ವಿದ್ಯಾರ್ಹತೆ ಕುರಿತು ಪ್ರಮಾಣ ಪತ್ರ ಮತ್ತು ಪದವಿಯ ಎಲ್ಲಾ ವರ್ಗಗಳ ಅಂಕ ಪಟ್ಟಿ ಲಗತ್ತಿಸಬೇಕು, 4) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ಪ್ರವರ್ಗ-1, ಹಿಂದುಳಿದ ವರ್ಗದ ಹಾಗೂ ಇನ್ನಿತರ ಮೀಸಲಾತಿ ಸೌಲಭ್ಯ ಪಡೆಯಲಿಚ್ಛಿಸುವ ಅಭ್ಯರ್ಥಿಗಳು ಸರಕಾರ ನಿಗಧಿಪಡಿಸಿದ ನಮೂನೆಯಲ್ಲಿ ಸಂಬಂಧಿಸಿದವರಿಂದ ದೃಢೀಕರಣ ಪಡೆದ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಹಾಜರಪಡಿಸತಕ್ಕದ್ದು. ಗ್ರಾಮೀಣ ಅಭ್ಯರ್ಥಿಗಳು ನಿರ್ದಿಷ್ಟ ಪಡಿಸಿದ ಅಧಿಕಾರಿಯಿಂದ ನಿಗದಿತ ನಮೂನೆಯಲ್ಲಿ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.
ಪ್ರವರ್ಗ - II ಎ, IIಬಿ, IIIಎ, IIIಬಿ, ಅಭ್ಯರ್ಥಿಗಳು **ನಮೂನೆ ಎಫ್** ನಲ್ಲಿ ಸಂಬಂಧಿಸಿದ ತಹಶೀಲ್ದಾರರವರಿಂದ ಅರ್ಜಿ ಸಲ್ಲಿಸುವ ದಿನಾಂಕದಂದು ಚಾಲ್ತಿಯಲ್ಲಿರುವ ಪ್ರಮಾಣ ಪತ್ರವನ್ನು ಪಡೆದಿಟ್ಟುಕೊಂಡಿರತಕ್ಕದ್ದು ಹಾಗೂ ಬ್ಯಾಂಕು ಕೇಳಿದಾಗ ಮೂಲ ಪ್ರಮಾಣ ಪತ್ರಗಳನ್ನು ಪರಿಶೀಲನೆಗಾಗಿ ಸಲ್ಲಿಸತಕ್ಕದ್ದು.

9. **ಇತರೆ ನಿಯಮಗಳು:**

1. ಪೂರ್ಣ ವಿವರಗಳನ್ನು ಹೊಂದದೆ ಇದ್ದ, ಸ್ಪಷ್ಟವಾಗಿ ಬರೆಯದೇ ಅಪೂರ್ಣವಿದ್ದ, ಸಹಿ ಮಾಡದೇ ಇರುವ ಹಾಗೂ ಅವಶ್ಯ ದಾಖಲಾತಿಗಳನ್ನು ಲಗತ್ತಿಸದೇ ಇರುವ ಹಾಗೂ ಅವಧಿ ಮೀರಿ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
2. ಅಭ್ಯರ್ಥಿಗಳ ಆಯ್ಕೆ, ಅರ್ಜಿ ಸ್ವೀಕರಿಸುವ ಮತ್ತು ನಿರಾಕರಿಸುವ ಹಕ್ಕನ್ನು ನೇಮಕಾತಿ ಸಮಿತಿ ಕಾಯ್ದಿರಿಸಿಕೊಂಡಿದೆ.
3. ನೇಮಕಾತಿ ದಿನಾಂಕಕ್ಕೆ ಹುದ್ದೆಗಳು ಖಾಲಿ ಇದ್ದಲ್ಲಿ ಮೀಸಲಾತಿ ಆಧರಿಸಿ ಈಗ ಆಮ್ಹಾನಿಸಿದ ಅರ್ಹ ಅರ್ಜಿಗಳಲ್ಲಿಯೇ ನೇಮಕಾತಿ ಸಮಿತಿ ಭರ್ತಿ ಮಾಡಿಕೊಳ್ಳುವ ಅಧಿಕಾರ ಹೊಂದಿರುತ್ತದೆ.
4. ನೇಮಕಾತಿಯನ್ನು ಯಾವುದೇ ಕಾರಣ ನೀಡದೇ ಮುಂದೂಡುವ, ರದ್ದುಪಡಿಸುವ, ನಿಬಂಧನೆಗಳನ್ನು ಬದಲಾಯಿಸುವ ಸಂಪೂರ್ಣ ಹಕ್ಕನ್ನು ಬ್ಯಾಂಕು ಕಾಯ್ದಿರಿಸಿಕೊಂಡಿದೆ.
5. ಆಯ್ಕೆಗೊಂಡ ಅಭ್ಯರ್ಥಿಗಳು ಎರಡು ವರ್ಷದ ಅವಧಿಯ ಪರೀಕ್ಷಾರ್ಹ ಸೇವೆಯಲ್ಲಿ ಇರಬೇಕಾಗುವುದು ಮತ್ತು ಆಯ್ಕೆಗೊಂಡ ಅಭ್ಯರ್ಥಿಗಳು ಬ್ಯಾಂಕಿನಿಂದ ಸೂಚಿಸಲ್ಪಟ್ಟಂತೆ ಭದ್ರತೆ ನೀಡಬೇಕು.
6. ಹೈದರಾಬಾದ ಮತ್ತು ಕರ್ನಾಟಕ ಪ್ರಾಂತೀಯ ಮೀಸಲಾತಿಗೆ ಅನ್ವಯವಾಗುವ ಪ್ರಮಾಣ ಪತ್ರಗಳ ಸ್ವಯಂ ದೃಢೀಕೃತ ಪ್ರತಿಗಳನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು ಹಾಗೂ ಪ್ರವರ್ಗ- II ಎ, IIಬಿ, IIIಎ, IIIಬಿ, ಅಭ್ಯರ್ಥಿಗಳು **ನಮೂನೆ ಎಫ್** ನಲ್ಲಿ ಸಂಬಂಧಿಸಿದ ತಹಶೀಲ್ದಾರರವರಿಂದ ಅರ್ಜಿ ಸಲ್ಲಿಸುವ ದಿನಾಂಕದಂದು ಚಾಲ್ತಿಯಲ್ಲಿರುವ ಪ್ರಮಾಣ ಪತ್ರವನ್ನು ಪಡೆದಿಟ್ಟುಕೊಂಡಿರತಕ್ಕದ್ದು ಝರಾಕ್ಷ ಪ್ರತಿಗಳನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು (ಸ್ವಯಂ ಧೃಢಿಕೃತ) ಹಾಗೂ ಬ್ಯಾಂಕು ಕೇಳಿದಾಗ ಮೂಲ ಪ್ರಮಾಣ ಪತ್ರಗಳನ್ನು ಪರಿಶೀಲನೆಗಾಗಿ ಸಲ್ಲಿಸತಕ್ಕದ್ದು.

ಸಹಿ/- ಸಂಚಾಲಕ ಸದಸ್ಯರು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ವಿಜಯಪುರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ ನಿ., ವಿಜಯಪುರ.

Scanned with CamScanner